॥ ಶ್ರೀಗುರುಭ್ಯೋ ನಮಃ ॥

॥ ಹರಿಃ ಓಂ ॥

# "ಕೃಷ್ಣನ ಕಲ್ಪನೆ "

ನಮ್ಮ ದೇಶದ ದೇವತಾ ಪರಿವಾರದಲ್ಲಿ ಶ್ರೀಕೃಷ್ಣನಿಗಿಂತ ಹೆಚ್ಚು ಸ್ವಾರಸ್ಯವಾದ ದೇವತೆಯಿಲ್ಲ; ಅವನಷ್ಟು ಜನಪ್ರಿಯನಾದ ದೇವರು ಮತ್ತೊಬ್ಬನಿಲ್ಲ.

ಕಾಶ್ಮೀರದಿಂದ ಕೇರಳದವರೆಗೆ ಎಲ್ಲ ಪ್ರಾಂತ್ಯಗಳಲ್ಲೂ ಶ್ರೀಕೃಷ್ಣನು ಪೂಜೆಗೊಳ್ಳುತ್ತಿದ್ದಾನೆ. ಇದು ಸಾವಿರಾರು ವರ್ಷಗಳಿಂದ ನಡೆದುಬರುತ್ತಿದೆ.

ಶ್ರೀಕೃಷ್ಣನುಯಾರು ? ದೇವತೆಯೋ, ಮನುಷ್ಯನೋ ? ಕೇವಲ ಕಲ್ಪನೆಯೋ ? ಅವನ ಜನಪ್ರಿಯತೆಯ ರಹಸ್ಯವೇನು ? ಶ್ರೀಕೃಷ್ಣ ಕಲ್ಪನೆಯು ಮೈದಳೆದದ್ದು ಯಾವಾಗ ? ಹೇಗೆ ? ಅದರ ಹಿನ್ನಲೆಯೇನು ? ಆದರೆ ಇಂಥ ಜಿಜ್ಞಾಸೆಯಿಂದ ಭಕ್ತರ, ಭಾವುಕರ ಶ್ರದ್ಧೆಗೆ, ಉತ್ಸಾಹಕ್ಕೆ ಕುಂದು ಬಂದಿಲ್ಲ, ಬರಬಾರದು. ಇತಿಹಾಸ ಶುದ್ಧವಾದ ಅನ್ವೇಷಣೆ, ವಿಶ್ಲೇಷಣೆ, ವಿಮರ್ಶೆಗಳಿಂದ ಶ್ರದ್ಧಾಳುಗಳ ಮನೋಧರ್ಮ ಕ್ಲಿಷ್ಟವಾಗಬೇಕಾದುದಿಲ್ಲ. ಜ್ಞಾನವು ದೃಢವಾಗಬೇಕೆಂಬ ದೃಷ್ಟಿಯಿಂದ ಇಂಥ ಜಿಜ್ಞಾಸೆ ಆವಶ್ಯಕ.

ವೈದಿಕ ವಾಙ್ಮಯದ ವಾಸುದೇವ ಕೃಷ್ಣ, ಮಹಾಭಾರತದಲ್ಲಿ ಪಾಂಡವಪಕ್ಷಪಾತಿಯಾಗಿ ಧರ್ಮಸಂಸ್ಥಾಪನೆಗೆ ಸೂತ್ರಧಾರಿಯಾಗಿ, ಕಾಣಬರುವ ಕುಶಲ ಶ್ರೀಕೃಷ್ಣ; ಭಗವದ್ಗೀತೆಯಲ್ಲಿ ಯೋಗೀಶ್ವರನಾಗಿ ಸ್ಪಷ್ಟನಾಗುವ ಭಗವಾನ್ ಕೃಷ್ಣ; ಭಾಗವತದಲ್ಲಿ ಗೋಪಿಕಾ ಪ್ರಣಯಿಯಾಗಿ ಕಾಣುವರಸಿಕ ಶ್ರೀಕೃಷ್ಣ; ಹರಿವಂಶಪೂರಾಣದಲ್ಲಿ ತೋರಿಬರುವ ಅವತಾರ ವಿಶೇಷವಾದ ಶ್ರೀಕೃಷ್ಣ ; ಹೀಗೆ ಅನೇಕ ಮುಖಗಳ ಕಲ್ಪನೆಯಿದೆ. ಅದೂ ಒಮ್ಮಲೆ ಮೈದಳೆದ ಕಲ್ಪನೆಯಲ್ಲ. ಕಾಲಾನುಕ್ರಮದಲ್ಲಿ ಹಲವಾರು ಹಿನ್ನೆಲೆಯಲ್ಲಿ ರೂಪಗೊಂಡ ಈ ಕಲ್ಪನೆಯಲ್ಲಿ ವಿಭಿನ್ನ ಮನೋಧರ್ಮಗಳು ಕೂಡಿಕೊಂಡಿದೆ. ಒಬ್ಬನೇ ಶ್ರೀಕೃಷ್ಣನಿಗೆ ಹಲವಾರು ವ್ಯಕ್ತಿತ್ವಗಳು ಪ್ರಸಕ್ತವಾಗಿದೆ. ಸಾಮರಸ್ಯವನ್ನು ಸಿದ್ಧಮಾಡುವುದು ಸುಲಭವಲ್ಲ ಗೊಂದಲದಿಂದ ಎಳೆಗಳನ್ನು ಬಿಡಿಸುವುರು ಕಷ್ಟದ ಕೆಲಸ. ಬೆಟ್ಟದ ತಪ್ಪಲಲ್ಲಿ ಓರಗೆಯ ಹುಡುಗರೊಂದಿಗೆ ದನ ಮೇಯಿಸುತ್ತಿದ್ದ ಹುಡುಗನೊಬ್ಬ "ಗೀತಾ

ಸಂದೇಶ "ದಂಥಾ ಪಾರಮಾರ್ಥಿಕ ಚಿಂತನೆಯನ್ನು ಈ ಜಗತ್ತಿಗೆ ಭೋದಿಸಿರುವುನ್ನು ನಂಬಲು ಸಾಧ್ಯವೆ ? ಶ್ರೀಕೃಷ್ಣನ ಬದುಕೆ ಹಾಗೆ ! ಜನಪದರಿಗೂ ಪಂಡಿತರಿಗೂ ಏಕಕಾಲದಲ್ಲಿ ಪ್ರಿಯವೆನಿಸುವ ಈ ದೇವರದ್ದು ನಿಜವಾದ ಅರ್ಥದಲ್ಲಿ ಒಂದು 'ಅನುಸಂಧಾನ' ದ ಲೌಕಿಕಬದುಕು. ಶ್ರೀರಾಮ, ಬುದ್ಧ, ಕ್ರಿಸ್ತ ಇಂಥ ಮಹಾವ್ಯಕ್ತಿಗಳಿಗಿಂತ ವಿಶಿಷ್ಟವಾದ ಜೀವನಗಾಥೆ ಶ್ರೀಕೃಷ್ಣನದು. ಎಲ್ಲರಾಗಿದ್ದೂ ಎಲ್ಲರಂತಾಗದ ಅಪೂರ್ವ ವ್ಯಕ್ತಿತ್ವವದು.

ಶ್ರೀಕೃಷ್ಣನೆಂಬ ಋಷಿಯು ಕವಿಯ ಪ್ರಸ್ತಾಪ ಋಗ್ವೇದದಲ್ಲಲಿಯೇ ಇದೆ. ವಾಸುದೇವನ ಪೂಜೆ ಕ್ರಿಸ್ತಪೂರ್ವದಲ್ಲಿ ಹರಿಡಿದ್ದಿತು.

ಬೌದ್ಧರ ನಿದ್ದೇಶ ಪಾಳೀ ಪ್ರಸ್ಥಾನ ಗ್ರಂಥವು (ಕ್ರಿಸ್ತ.ಪೂ. 4ನೇ ಶತಮಾನ) ವಾಸುದೇವನಲ್ಲಿ ಭಕ್ತಿಯನ್ನಿಟ್ಟ ಪಂಥವೊಂದು ಪ್ರಚಲಿತವಾಗಿದ್ದಿತೆಂದು ಹೇಳಲಾಗುತ್ತದೆ. ಜೈನರ ತ್ರಿಷಷ್ಠಿ ಶಕಲಾಪುರುಷನಲ್ಲಿ ಹಲವರಿಗೆ ಶ್ರೀಕೃಷ್ಣನ ಸಂಪರ್ಕವುಂಟು.ಗೀತೆಯಲ್ಲಿ . ಅರ್ಜುನನು ಹೇಳುವಂತೆ ಪ್ರಮಾದದಿಂದಲೋ, ಪ್ರಸಭದಿಂದಲೋ ಮಹಿಮೆಯನ್ನು ತಿಳಿಯದೆನೋ ಪಾಂಡವರ ಪಾಲಿಗೆಸುಖ, ಯಾದವ.

ಮಹಾಭಾರತದ 'ಶಾಂತಿ ಪರ್ವ' ದಲ್ಲಿ ಶ್ರೀಕೃಷ್ಣನು ದಿನವೂ ಬೆಳಗಿನ ಜಾವದಲ್ಲಿಯೇ ಎದ್ದು ಬ್ರಹ್ಮನಲ್ಲಿ ಚಿತ್ತವನ್ನು ನಿಧಿಧ್ಯಾಸವನ್ನು ಮಾಡಿ ಧ್ಯಾನತತ್ಪರನಾಗಿರುತ್ತಿದ್ದನೆಂಬ ವಿವರವಿದೆ. ಶ್ರೀಮದ್ಭಾಗವತದಲ್ಲಿಯೂ ಶ್ರೀಕೃಷ್ಣನು ಪ್ರತಿದಿನ ಪ್ರಾತಃಕಾಲದಲ್ಲಿ ಧ್ಯಾನಮಗ್ನನಾಗಿ ತನ್ನ ಆತ್ಮವನ್ನು ವಿಶ್ವಾತ್ಮನೊಂದಿಗೆ ಸೇರಿಸುತ್ತಿದ್ದನೆಂಬ ಪ್ರಸ್ತಾಮಪವೂ ಬರುತ್ತದೆ.

ಪ್ರೇಮಮಯಿಯಾದ ರಾಧೆ, ಪ್ರಣಯಿಯಾದ ಶ್ರೀಕೃಷ್ಣ ಇವರ ಸಂಬಂಧಕ್ಕೆ ತಾತ್ವಿಕವಾದ, ಪಾರಮಾರ್ಥಿಕವಾದ ತಾತ್ಪರ್ಯವುಂಟೆಂದು ಗೋಪಿಕಾಗೀತೆಯ ಒಕ್ಕಣೆ.

ಕ್ರಿಸ್ತಾಬ್ದದ ಆದಿಭಾಗದಲ್ಲಿ ಮೈದಳೆದ ಮೇಘಸಂದೇಶದಲ್ಲಿಯೂ ಕಾಲಿದಾಸನು ಶ್ರೀಕೃಷ್ಣವತಾರದ ಸೌಂದರ್ಯವನ್ನು ಪ್ರಸ್ತಾಪಿಸಿದ್ದಾನೆ. ಎಲ್ಲ ಕಾಲದ ಜನರ ಮನಸ್ಸನ್ನು ಸೂರೆಗೊಂಡ ಕಲ್ಪನೆ ಕೃಷ್ಣನದು.

ಆದರೆ ಕೃಷ್ಣಾವತಾರದ ತಾತ್ಪರ್ಯವನ್ನು ಅರ್ಥಮಾಡಿಕೊಳ್ಳಲು ಸಾಮಾನ್ಯ ಮಾನವ ಮನೋಧರ್ಮವನ್ನು ಮೀರಿ ಹೋಗಬೇಕಿದಿಲ್ಲ. ಇದು ಗೋಪಿಕಾ ಸಾರಂಭದಲ್ಲಿ ಕಾಣುತ್ತದೆ. ಅವತಾರವೆಂಬ ಅರಿವಿದ್ದರೂ ಗೋಪಿಯರು ಶ್ರೀಕೃಷ್ಣನನ್ನು ಜಾರನೆಂದೇ ಪರಿಗಣಿಸಿದ್ದರಲ್ಲವೇ ? 'ಗೋಪಿಕೋನ್ಮಾದ' ವೆಂಬುದೊಂದು ಸಂಸ್ಕೃತ ಕಾವ್ಯ; ಅಷ್ಟುಪ್ರಸಿದ್ಧವಲ್ಲ. ಇಲ್ಲಿ ಗೋಪಿಯೊಬ್ಬಳು ಮತ್ತೊಬ್ಬಳಿಗೆ ಶ್ರೀಕೃಷ್ಣನು ವಿಶ್ವಾಸಕ್ಕೆ ಯೋಗ್ಯವಲ್ಲನೆಂದು ಹೇಳುತ್ತಾ, ಅವನ ಪೂರ್ವೋತ್ತರಗಳನ್ನು ಪ್ರಸ್ತಾಪಿಸುತ್ತಾಳೆ. ರಾಮನಾಗಿ ಅವನು ಮಾಡಿದುದು ಏನು ? ತನ್ನನ್ನು ನಂಬಿದ ಸೀತೆಯನ್ನು ಕೈಬಿಟ್ಟನಲ್ಲವೇ ? ರಾವಣನ್ನು ಕೊಂದು ಅವಳನ್ನು ಹಿಂದಕ್ಕೆ  ಕರೆತಂದು ಅಗ್ನಿಯಲ್ಲಿ ಪರೀಕ್ಷೆ ಮಾಡಿಸಿ. ಶುದ್ಧಳೆಂದು ಲೋಕಕ್ಕೆ ತೋರಿಸಿದ  ಮೇಲೂ ಯಾರದೋ ಮಾತು ನಂಬಿ ಕಾಡಿಗೆ ಕಳುಹಿಸಿದ ರಾಮನಿಗೆ ಕರುಣೆಯುಂಟೆ ? ಅಂಥ ನಿರ್ಘೃಣನ್ನಲ್ಲಿ ಈಗ ನಾವು ಮನಸ್ಸು ಬಿಡಬಹುದೇ ? ಅವನ ಸ್ವಭಾವವೇ ಡೊಂಕು. ಅಥವಾ ಶ್ರೀಕೃಷ್ಣನನ್ನು ರಸಿಕನೆಂದು ನಂಬಬಹುದೋ ? ನಾರಾಯಣನಾಗಿ ಯೋಗ ಮಾಡುತ್ತಾನೆಂದು ಬದರಿಗೆ ಹೋಗಿ ಅಲ್ಲಿ ಇಂದ್ರಿಯ ನಿಗ್ರಹಮಾಡಿ ಕೂತು ಬಿಡಲಿಲ್ಲವೇ ? ಅಪ್ಸರೆಯರು ಕೂಡ ಅವನನ್ನು ಕದಲಿಸಲಾಗಲಿಲ್ಲವಷ್ಟೇ. ಆದರೆ ಯೋಗಿಯೆಂದು ಕೂಡ ನಂಬಬಾರದು. ಏಕೆಂದರೆ ಮುಕ್ತಸಂಗನಾದ ವಿರಾಗಿಯ ತೊಡೆಯಿಂದ ಸುಂದರಿಯಾದ ಊರ್ವಶಿಯು ಬಂದುದು ಹೇಗೆ ? ಹೀಗೆಲ್ಲ ಮುಗ್ದರಾದ ಗೋಪಿಕಾ ಸ್ತ್ರೀಯರು ಶ್ರೀಕೃಷ್ಣನನ್ನು ದೂಷಿಸಿದರು ಅವನಲ್ಲಿ ದ್ವೇಷ ಮಾಡುವುದು ಅವರಿಂದಾಗಲಿಲ್ಲ.

ಶ್ರೀಕೃಷ್ಣನ ಸ್ವಭಾವವೇ ಅವಾಜ್ಯ ಪ್ರೀತಿಯ ಪರಿಪಾಕ. ಅವನಿಗೆ ಯುಕ್ತವಾದ ಪ್ರವೃತ್ತಿಯೆಂದರೆ ಅನುರಕ್ತಿ; ನಿಸ್ಸೀಮವಾದ ಭಕ್ತಿ; ಅನನ್ಯಪ್ರಪತ್ತಿ.

ಇದೇ ಶ್ರೀಕೃಷ್ಣವತಾರದ ಆಧ್ಯಾತ್ಮಿಕ ಆದೇಶ, ಸಂದೇಶ, ಉದ್ದೇಶ ಗೋಕುಲದಿಂದ ಮಥುರೆಗೆ , ಮಥುರೆಯಿಂದ ದ್ವಾರಕೆಗೆ ಸಾಗಿದ ಶ್ರೀಕೃಷ್ಣನ ಜೀವನ ಹಾದಿಯುದ್ಧಕ್ಕೂ ಪರಂಪರೆ ಮತ್ತು ಹೊಸತನದ ಬೆಸುಗೆ ಎದ್ದುಕಾಣುತ್ತಿದೆ.

ಹಳ್ಳಿ ಮತ್ತು ಪಟ್ಟಣಗಳ ಇಬ್ಬಗೆಯ ಸಂಸ್ಕಾರಿಗಳನ್ನು 'ಸಮನ್ವಯ' ಮನೋಧರ್ಮದಲ್ಲಿ ಸ್ವೀಕರಿಸಿದ ಶ್ರೀಕೃಷ್ಣನ ಆದರ್ಶ ಇಂದಿಗೂ ಎಂದಿಗೂ ಪ್ರಸ್ತುತ.

ಇಂದು ಹೊಸ ಸಾಂಸಾರಿಕ ಬಿರುಗಾಳಿಗೆ ನೆಲದ ಮಹತ್ವತರ ನೆಲೆಯಾಗುತ್ತಿದೆ, ನವವಸಾಹತು ಶಾಹಿಯ ದಿನಗಳಲ್ಲಿ ತಮ್ಮತನವೇ ಕಳೆದು ಹೋಗುತ್ತಿದೆ. ಇಂಥ ಸಂಕ್ರಮಣಕಾಲದಲ್ಲಿ ಶ್ರೀಕೃಷ್ಣಗಾಥೆ ನಮಗೆ ‘ಕೈಕಂಬ’ ವಾಗಲಿ.

‘ವಾಸುದೇವಸುತಂ ದೇವಂ ಕಂಸಚಾಣೂರ ಮರ್ದನಂ ।

ದೇವಕಿಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ ॥’

॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥

‘ ಪ್ರಣವ ’

(ಗುರುರಾಜ ಪೋಶೆಟ್ಟಿಹಳ್ಳಿ )